## ಕೈಮಗ್ಗ ಪುನಃಶ್ಚೇತನ ಪ್ಯಾಕೇಜ್

2011-12ನೇ ಸಾಲಿನ ಬಡ್ಜೆಟ್ ಭಾಷಣದಲ್ಲಿ ಕೇಂದ್ರದ ಆರ್ಥಿಕ ಮಂತ್ರಿಗಳು ಕೈಮಗ್ಗ ಕ್ಷೇತ್ರಕ್ಕೆ ಆರ್ಥಿಕ ಪ್ಯಾಕೇಜ್ ಘೋಷಿಸಿರುವಂತೆ ಅಭಿವೃದ್ಧಿ ಆಯುಕ್ತರು ಕೈಮಗ್ಗ ಸದರಿ ಪ್ಯಾಕೇಜ್‌ನಡಿ ಕೈಮಗ್ಗ ವಿಭಾಗದ ಪುನರ್‌ಜ್ಜೀವನ, ಸುಧಾರಣೆ ಹಾಗೂ ಪುನರ್‌ರಚನೆಗೆ ಸಂಬಂಧಿಸಿದಂತೆ ಕೆಲವೊಂದು ಮಾರ್ಗದರ್ಶನಗಳನ್ನು ನೀಡಿರುತ್ತಾರೆ. ಇದರ ಪ್ರಮುಖ ಅಂಶಗಳನ್ನು ಈ ಕೆಳಕಂಡಂತಿರುತ್ತದೆ:

* ಈ ಯೋಜನೆಯಡಿ Viable & Potentially Viable PWCS, AWCS, Individual Handloom Weaver, Master Weaver, SHG (Self Help Groups)& JLG (Joint Liability Groups) ಗಳಿಗೆ ನೇಕಾರಿಕೆ ಉದ್ದೇಶಕ್ಕಾಗಿ ಪಡೆದಿರುವ ಸಾಲದ 100% ಅಸಲು ಮತ್ತು 25% ಬಡ್ಡಿ ಮರುಪಾವತಿಸಲು ಸಾಲ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಪ್ರತಿಯೊಬ್ಬ ಫಲಾನುಭವಿಗೆ ರೂ. 50,000/- ಯನ್ನು ಒದಗಿಸಲು ಮಿತಿಯನ್ನು ನಿಗದಿಪಡಿಸಿರುತ್ತಾರೆ.
* ಈ ಸ್ಕೀಮ್‌ನಡಿ ಬರುವ ಎಲ್ಲಾ ಅರ್ಹ PWCS, Individual Handloom Weaver ಗಳಿಗೆ ಹೊಸದಾಗಿ ಸಾಲ ನೀಡುವ ದಿನಾಂಕದಿಂದ 3 ವರ್ಷಗಳವರೆಗೆ 3% ಬಡ್ಡಿ ಸಹಾಯಧನ ಒದಗಿಸಲಾಗುವುದು. ಒಂದು ಪಕ್ಷ ಸದರಿ ಸಾಲ NPA (Non Performing Asset) ಆದಲ್ಲಿ ಬಡ್ಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
* ಸಾಲ ನೀಡಿದ ದಿನಾಂಕದಿಂದ 3 ವರ್ಷಗಳವರೆಗೆ CGTMSE ಗೆ ಪಾವತಿಸುವ ಕುರಿತು Guarantee Fee @ 1% & Annual Service Fee @ 0.5 % ಅನ್ನು ವಿಧಿಸಲಾಗುವುದು.
* **ರಾಜ್ಯ ಸರ್ಕಾರವು MOU ಸಹಿ ಮಾಡಿದ ನಂತರ ನಬಾರ್ಡ್‌ನಿಂದ ಸ್ಪೆಷಲ್ ಆಡಿಟ್ ಕೈಗೊಂಡ ನಂತರ ಭಾರತ ಸರ್ಕಾರವು ತನ್ನ ವಂತಿಕೆಯ 80% ರಷ್ಟು ಭಾಗವನ್ನು ಬಿಡುಗಡೆ ಮಾಡಲಿದ್ದು, ಉಳಿದ 20% ಭಾಗವನ್ನು Legal ಮತ್ತು Institutional Reforms ಅಳವಡಿಸಿಕೊಂಡ ತರುವಾಯ ಬಿಡುಗಡೆ ಮಾಡಲಾಗುವುದು,**

ಮುಂದುವರೆದು, ಈ ಕುರಿತು ಲೆಟರ್ ಆಫ್ ಕಮಿಟ್‌ಮೆಂಟನ್ನು ಅಭಿವೃದ್ಧಿ ಆಯುಕ್ತರು, ಜವಳಿ ಮಂತ್ರಾಲಯ, ಭಾರತ ಸರ್ಕಾರ ರವರಿಗೆ ಸಲ್ಲಿಸಿರುವ ತರುವಾಯ ಭಾರತ ಸರ್ಕಾರ ಮತ್ತು ನಬಾರ್ಡ್‌ನೊಂದಿಗೆ ರಾಜ್ಯ ಸರ್ಕಾರವು MOU ಸಹಿ ಮಾಡುವ ಕುರಿತು ಮಾನ್ಯ ಮುಖ್ಯಮಂತ್ರಿಯವರಿಂದ ಅನುಮೋದನೆ ಪಡೆದು ದಿನಾಂಕ: 02.05.2012 ರಂದು MOU ಸಹಿ ಮಾಡಲಾಗಿರುತ್ತದೆ.

ಈವರೆಗೂ ಭಾರತ ಸರ್ಕಾರದ ನಿರ್ದೇಶನದಂತೆ ನಬಾರ್ಡ್ ಮುಖೇನ ವಿಶೇಷ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಎಸ್‌ಐಎಂಆರ್‌ಸಿ ನಡವಳಿಗಳಲ್ಲಿ ಈ ಕೆಳಕಂಡಂತೆ ವಿವಿಧ Component ಗಳಡಿ ಅರ್ಹ ಕ್ಲೇಮ್ ಮೊತ್ತವನ್ನು ಅನುಮೋದಿಸಲಾಗಿದ್ದು, ನಬಾರ್ಡ್ ಸಂಸ್ಥೆಗೆ ಬಿಡುಗಡೆ ಮಾಡಿದ್ದು, ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಬಿಡುಗಡೆ ಮಾಡುವಂತೆ ಸೂಚಿಸುತ್ತಾ ಅರ್ಹ ಫಲಾನುಭವಿಗಳ ಖಾತೆಗೆ ಹೊಂದಾಣಿಕೆ ಮಾಡಲು ತಿಳಿಸಲಾಗಿರುತ್ತದೆ.

2012-13 ನೇ ಸಾಲಿನಲ್ಲಿ ಕೈಮಗ್ಗ ಪುನಶ್ಚೇತನ ಪ್ಯಾಕೇಜ್‌ನಡಿ ಬಿಡುಗಡೆಯಾಗಿರುವ ಅನುದಾನದ ವಿವರ: 1 ನೇ ಹಂತ

| ಕ್ರಮ ಸಂಖ್ಯೆ | ಫಲಾನುಭವಿಗಳ ವಿವರ | ಫಲಾನುಭವಿಗಳ ಸಂಖ್ಯೆ | ಕೇಂದ್ರದ ಪಾಲು ರೂ. | ರಾಜ್ಯದ ಪಾಲು ರೂ. | ಒಟ್ಟು ರೂ. |
|---|---|---|---|---|---|
| 1 | ವೈಯಕ್ತಿಕ ನೇಕಾರರು & ಸ್ವ.ಸ.ಗುಂ | 603 & 2 | 1,06,84,885 | 26,71,222 | 1,33,56,107 |
| 2 | ಅಪೆಕ್ಸ್ ಕೈಮಗ್ಗ ನೇಕಾರರ ಸ.ಸಂಘ | 1 | 55,86,480 | 18,62,159 | 74,48,639 |
| 3 | ಪ್ರಾಥಮಿಕ ಕೈಮಗ್ಗ ನೇಕಾರರ ಸ.ಸಂಘ | 142 | 2,87,39,674 | 73,38,468 | 3,60,78,142 |
| | ಒಟ್ಟು | | **4,50,11,039** | **1,18,71,849** | **5,68,82,888** |

ದಿನಾಂಕ: 27.09.2013 ರ ಭಾರತ ಸರ್ಕಾರದ ತಿದ್ದುಪಡಿ ಮಾರ್ಗಸೂಚಿಯನ್ವಯ ಈ ಯೋಜನೆಯಡಿ ಇನ್ನೂ ಹೆಚ್ಚು ಸಹಕಾರ ಸಂಘಗಳು ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಅನುವಾಗುವಂತೆ ಕೆಲವೊಂದು ಅರ್ಹತಾ ಮಾರ್ಗಸೂಚಿಗಳನ್ನು ಸಡಿಲಿಸಿದ್ದು, ಅದರಂತೆ ವಿಶೇಷ ಲೆಕ್ಕಪರಿಶೋಧನೆ ನಡೆಸಿ ಈ ಕೆಳಕಂಡಂತೆ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಎಸ್‌ಐಎಂಆರ್‌ಸಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಯೋಜನೆಯ 2ನೇ ಹಂತದ ವಿವರಗಳು

| ಕ್ರಮ ಸಂಖ್ಯೆ | ಫಲಾನುಭವಿಗಳ ವಿವರ | ಫಲಾನುಭವಿಗಳ ಸಂಖ್ಯೆ | ಕೇಂದ್ರದ ಪಾಲು ರೂ. | ರಾಜ್ಯದ ಪಾಲು ರೂ. | ಒಟ್ಟು ರೂ. |
|---|---|---|---|---|---|
| 1 | ವೈಯಕ್ತಿಕ ನೇಕಾರರು & ಸ್ವ.ಸ.ಗುಂ | 59 & 3 SHGs | 11,63,180 | 2,90,794 | 14,53,974 |
| 2 | ಪ್ರಾಥಮಿಕ ಕೈಮಗ್ಗ ನೇಕಾರರ ಸ.ಸಂಘ | 77 | 2,81,61,950 | 72,15,816 | 3,53,77,765 |
| | ಒಟ್ಟು | | **29325130** | **7506610** | **3,68,31,793** |

ಯೋಜನೆಯ ಅಂತ್ಯಕ್ಕೆ ಇದ್ದಂತೆ ಕ್ರೂಢೀಕೃತ ವಿವರಗಳು

| ಕ್ರಮ ಸಂಖ್ಯೆ | ಫಲಾನುಭವಿಗಳ ವಿವರ | ಫಲಾನುಭವಿಗಳ ಸಂಖ್ಯೆ | ಕೇಂದ್ರದ ಪಾಲು ರೂ. | ರಾಜ್ಯದ ಪಾಲು ರೂ. | ಒಟ್ಟು ರೂ. |
|---|---|---|---|---|---|
| 1 | ವೈಯಕ್ತಿಕ ನೇಕಾರರು & ಸ್ವ.ಸ.ಗುಂ | 662 & 5 SHGs | 11848065 | 2962016 | 14810081 |
| 2 | ಅಪೆಕ್ಸ್ ಕೈಮಗ್ಗ ನೇಕಾರರ ಸ.ಸಂಘ | 1 | 5586480 | 1862159 | 7448639 |
| 3 | ಪ್ರಾಥಮಿಕ ಕೈಮಗ್ಗ ನೇಕಾರರ ಸ.ಸಂಘ | 219 | 56901624 | 14554284 | 71455907 |
| | ಒಟ್ಟು | | **74336169** | **19378459** | **93714627** |